
# ರೋಮೇ ರೋಲಾ

**ಡಾ. ಎಚ್. ಪಾಂಡುರಂಗ ವಿಠಲ**

ಶ್ರೀರಾಮಕೃಷ್ಣರ, ವಿವೇಕಾನಂದರ ದಿವ್ಯಜೀವನ, ಭಾವನೆಗಳನ್ನು ಅನನ್ಯವಾದ ಭಾಷೆಯ ಲಾಲಿತ್ಯದಿಂದ ಹಾಗೂ ಭಾವಪೂರ್ಣ ವಿಚಾರಗಳಿಂದ ಜಗತ್ತಿಗೆ ಪರಿಚಯಿಸಿದ ಪ್ರಸಿದ್ಧ ಲೇಖಕರ ಪರಿಚಯವನ್ನು ಮೈಸೂರಿನ ಶ್ರೀಪಾಂಡುರಂಗ ವಿಠಲ ಅವರು ನೀಡಿದ್ದಾರೆ. ಭಾಷೆ ಹಾಗೂ ತತ್ತ್ವಶಾಸ್ತ್ರಗಳಲ್ಲಿ ಉನ್ನತ ಪದವೀಧರರಾಗಿರುವ ಇವರು ಮೈಸೂರಿನ ಸದ್ವಿದ್ಯಾ ಪಾಠಶಾಲೆಯಲ್ಲಿ ಕನ್ನಡ ಉಪನ್ಯಾಸಕರು.

ವಿಶಾಲ ಚಿಂತನೆಗೆ ತಮ್ಮನ್ನು ತೆರೆದುಕೊಳ್ಳಬಲ್ಲ ಪಾಶ್ಚಾತ್ಯರಿಗೆ ಭಾರತೀಯ ವೇದಾಂತ, ಅದರಲ್ಲೂ ಶ್ರೀರಾಮಕೃಷ್ಣ–ವಿವೇಕಾನಂದರ ಸಮನ್ವಯ ಚಿಂತನೆ, ಈ ಯುಗದ ಮಾರ್ಗವಾಗಿ ತೋರುತ್ತದೆ. ಅದನ್ನು ಅವರೆಲ್ಲರೂ ತಮ್ಮ ಜೀವನವಿಧಾನವನ್ನಾಗಿ ಪರಿಗಣಿಸಿ, ಅನುಸರಿಸುತ್ತಾರೆ. ಶ್ರೀರಾಮಕೃಷ್ಣ–ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಗಳನ್ನು ಬರೆದ ನೊಬೆಲ್ ಪ್ರಶಸ್ತಿ ಪುರಸ್ಕೃತ ಫ್ರೆಂಚ್ ಸಾಹಿತಿ ರೋಮೇ ರೋಲಾ ಇದಕ್ಕೆ ಒಂದು ಉದಾಹರಣೆ. ಈತ ಕಾದಂಬರಿ, ನಾಟಕ, ಪ್ರಬಂಧಗಳನ್ನು ಬರೆದುದಲ್ಲದೆ ತನ್ನ ಕಾಲದ ಎಲ್ಲ ಸಾಮಾಜಿಕ, ರಾಜಕೀಯ ಹಾಗೂ ಆಧ್ಯಾತ್ಮಿಕ ಘಟನೆಗಳಲ್ಲಿ ತೀವ್ರವಾಗಿ ಪಾಲುಗೊಳ್ಳುತ್ತಿದ್ದ. ಡ್ರೇಫಸ್ ಹಗರಣ (ಫ್ರೆಂಚ್ ಸೈನ್ಯದ ಪಕ್ಷಪಾತ), ಕಮ್ಯುನಿಸಂ, ನಾಜಿ ವಾದಗಳ ವಿರುದ್ಧ ಪ್ರಬಲ ದನಿ ಎತ್ತಿದ; ಜೀವನವಿಡೀ ವಿಶ್ವಶಾಂತಿಯ ಮಾರ್ಗಗಳ ಹುಡುಕಾಟದಲ್ಲಿ ತೊಡಗಿದ್ದ. ವಿದ್ಯಾರ್ಥಿ ದೆಸೆಯಲ್ಲೆ ಧಾರ್ಮಿಕ ಅಸ್ತವ್ಯಸ್ತತೆಯಲ್ಲಿದ್ದ ಸಮಾಜವನ್ನು ಕಂಡು ತನ್ನ ಧಾರ್ಮಿಕ ನಂಬಿಕೆಯನ್ನು ಕಳೆದುಕೊಂಡ. ಕಲೆಯಲ್ಲಿ ಡಾಕ್ಟರೇಟ್ ಪಡೆದು ಉಪಾಧ್ಯಾಯನಾದರೂ, ಕ್ರಮೇಣ ಬರಹಕ್ಕೇ ತನ್ನ ಪೂರ್ಣ ಕಾಲವನ್ನು ವಿನಿಯೋಗಿಸಿದ. ಹತ್ತು ಸಂಪುಟಗಳ ಜೀನ್ ಕ್ರಿಸ್ಟೋಫೆ ಮಹಾ ಕಾದಂಬರಿಯನ್ನು ಬರೆದ. 'ಯುದ್ಧವನ್ನು ಮೀರಿ' ದೀರ್ಘ ಪ್ರಬಂಧಕ್ಕೆ ೧೯೧೫ರ ನೊಬೆಲ್ ಪ್ರಶಸ್ತಿ ಗಳಿಸಿದ. ಸತ್ಯ ಹಾಗೂ ಮಾನವೀಯತೆಗಳಿಗೆ ಗೌರವ ನೀಡಬೇಕೆಂದು ಆ ಪ್ರಬಂಧದಲ್ಲಿ ನೀಡಿದ್ದ ಕರೆ ಫ್ರಾನ್ಸ್ ಮತ್ತು ಜರ್ಮನಿಗಳ ಮೊದಲ ಮಹಾಯುದ್ಧದ ಸಂದರ್ಭದಲ್ಲಿ ತಪ್ಪಾಗಿ ಅರ್ಥೈಸಲ್ಪಟ್ಟು, ಅವನು ಸ್ವಿಡ್ಜರ್ಲೆಂಡಿಗೆ ಹೋಗಬೇಕಾಯಿತು.



ಬಾಲಕನಾಗಿದ್ದಾಗಿನಿಂದಲೂ ರೋಮೇ ರೋಲಾ ಶಾಂತಿ ಹೊಂದಾಣಿಕೆಗಳಿಗೆ ತುಡಿಯುತ್ತಿದ್ದ ಅಂತರ್ಮುಖಿಯಾಗಿದ್ದ. ಎಳವೆಯಿಂದಲೂ ಧರ್ಮದ ಸೆಳೆತ, ಸತ್ಯವು ದಿನನಿತ್ಯದ ಅನುಭವಕ್ಕೆ ನಿಲುಕಬೇಕೆನ್ನುವ ಹುಡುಕಾಟ, ಆಧ್ಯಾತ್ಮಿಕ ಪ್ರವೃತ್ತಿ ಅವನದಾಗಿತ್ತು. ಇಪ್ಪತ್ತನೆಯ ವಯಸ್ಸಿನ ವಿದ್ಯಾರ್ಥಿಯಾಗಿರುವಾಗಲೆ ಅವನಿಗೆ ಭಗವದ್ಗೀತೆ, ಉಪನಿಷತ್ತುಗಳ ಪರಿಚಯವಾಯಿತು. ಇವು ಅಗ್ನಿಪರ್ವತದಂತೆ ತನ್ನ ಮನಸ್ಸಿನ ಮೇಲೆ ಪರಿಣಾಮ ಮಾಡಿದುವೆಂದು ಆತ ಹೇಳಿದ್ದಾನೆ.

ಹೀಗೆ ಲೇಖಕನಾಗಿ ಹಲವಾರು ದೇಶಗಳಲ್ಲಿ ಪ್ರಸಿದ್ಧಿ ಪಡೆದಿದ್ದರೂ ಕಟ್ಟಾ ಶಾಂತಿವಾದಿಯಾಗಿದ್ದ ರೋಲಾ, ಫ್ರಾನ್ಸ್ ಜರ್ಮನಿಗಳನ್ನು ನಿಂದಿಸಿ ಬರೆದಾಗ ಅವನ ವಿರುದ್ಧ ಜನರ ಅಸಹನೆ ಸ್ಫೋಟಗೊಂಡಿತು. ಯುದ್ಧ ನಡೆಯುವಾಗ ಸ್ವಿಡ್ಜರ್ಲೆಂಡಿಗೆ ಹೋದ ರೋಲಾ ೧೯೩೮ರವರೆಗೆ ಅಲ್ಲೇ ಇರುವಂತಾಯಿತು. ಮುಂದೆ ರೋಲಾ ಇನ್ನಷ್ಟು ಭಯ, ಅವ್ಯವಸ್ಥೆಗಳಿಗೆ ಕಾರಣವಾದ ನಾಜಿವಾದದ ಬೆಳವಣಿಗೆಯಿಂದ ತನ್ನ ಅಭಿಪ್ರಾಯಗಳನ್ನು ಬದಲಿಸಿಕೊಂಡಿದ್ದರೂ, ಶಾಂತಿವಾದಿಯಾಗಿಯೆ ಉಳಿದ. ಅವನದು ಯುದ್ಧ ಮತ್ತು ಹಿಂಸೆಗಳ ಬಗ್ಗೆ ತೀವ್ರವಾದ ವಿರೋಧ. ಈ ಅಶಾಂತ ಸ್ಥಿತಿಯಿಂದ ರೋಲಾ ಇನ್ನಷ್ಟು ಅಂತರ್ಮುಖಿಯಾದನು.

ಕಾರ್ಲೈಲ್‌ನಂತೆ ರೋಲಾ ಶ್ರೇಷ್ಠ ವ್ಯಕ್ತಿಗಳ ಬಗೆಗೆ ಭಾವುಕನಾಗಿದ್ದ. ಇದು ಬಿಥೋವೆನ್, ಮೈಕೇಲಾಂಜಲೋ, ಟಾಲ್‌ಸ್ಟಾಯ್, ಗಾಂಧಿ, ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದರ ಅದ್ಭುತ ಜೀವನ ಚರಿತ್ರೆಗಳನ್ನು ರಚಿಸಲು ಕಾರಣವಾಯಿತು. ಕೊನೆಯದಾಗಿ ಶ್ರೀರಾಮಕೃಷ್ಣ–ವಿವೇಕಾನಂದರ ಜೀವನದ

ಅರಿವಿನಲ್ಲಿ ಸತ್ಯದ ಬಗೆಗಿನ ಅವನ ಹುಡುಕಾಟ ಸಂತೃಪ್ತ ಗೊಂಡಿತು. ಗಾಂಧಿ, ಟಾಗೋರ್, ನೆಹರೂ, ಆನಂದ ಕುಮಾರಸ್ವಾಮಿ, ಜೆ.ಸಿ. ಬೋಸ್, ದೀನಬಂಧು ಸಿ.ಎಫ್. ಆಂಡ್ರೂಸ್ ಮುಂತಾದ ಭಾರತೀಯ ಚಿಂತಕರಲ್ಲಿ ಪ್ರಮುಖ ರೆಲ್ಲ ರೋಲಾ ಅವರ ಅತಿಥಿಗಳಾಗಿ ವಿಚಾರ ವಿನಿಮಯ ನಡೆಸಿದರು. ಟಾಗೋರರ 'ಜಪಾನ್‌ಗೆ ಭಾರತದ ಸಂದೇಶ' ಕೃತಿಯು ಪ್ರಪಂಚದ ಇತಿಹಾಸಕ್ಕೇ ಒಂದು ಮುಖ್ಯ ತಿರುವು ನೀಡುವುದೆಂದು ರೋಲಾ ಭಾವಿಸಿದ್ದ. ೧೯೨೦ರಲ್ಲಿ ಭೇಟಿ ಯಾದ ಟಾಗೋರರು ರೋಲಾನಿಗೆ "ಭಾರತವನ್ನು ನೀವು ಅರ್ಥ ಮಾಡಿಕೊಳ್ಳಬೇಕೆಂದಿದ್ದರೆ ವಿವೇಕಾನಂದರನ್ನು ಅಧ್ಯಯನ ಮಾಡಿ. ಅವರಲ್ಲಿ ಎಲ್ಲವೂ ಪಕ್ವ, ಶುದ್ಧ, ವಾಸ್ತವಿಕ. ಪ್ರತಿಷೇಧ, ವಿರೋಧ, ನಿರಾಕರಣಗಳು ಯಾವುವೂ ಇಲ್ಲ", ಎಂದಿದ್ದರು. ಭಾರತೀಯ ತತ್ತ್ವಶಾಸ್ತ್ರದ ಆಳವಾದ ಅಧ್ಯಯನ, ಟಾಗೋರ್ ಗಾಂಧಿಯವರ ಭಾವಗ್ರಹಣ ಮತ್ತು ಸ್ವಂತವಾಗಿ ಯುರೋಪ್ ತನ್ನನ್ನು ಉದ್ಧರಿಸಿಕೊಳ್ಳಲಾರದೆಂಬ ಕ್ರಮವಾಗಿ ಗಟ್ಟಿಗೊಂಡ ನಿರ್ಣಯ—ಇವು ರೋಲಾನಿಗೆ ಶ್ರೀರಾಮಕೃಷ್ಣ-ವಿವೇಕಾನಂದರ ಜೀವನ ಚರಿತ್ರೆಗಳನ್ನು ಬರೆಯಲು ಸ್ಫೂರ್ತಿ ನೀಡಿದುವು. ಹಿಂದೆ ಅವನನ್ನು ಉತ್ತೇಜಿಸುತ್ತಿದ್ದ ಷೇಕ್ಸ್‌ಪಿಯರ್ ಮೊದಲಾದ ಶ್ರೇಷ್ಠರ ದನಿಗಳು ಈಗ ಕ್ಷೀಣಗೊಂಡಿದ್ದುವು. ಪಶ್ಚಿಮದ ಸಂಸ್ಕೃತಿಯ ಸಮಸ್ಯೆಗಳ ಪರಿಹಾರಕ್ಕೆ ಉತ್ತರ ಹುಡುಕಲು ರೋಲಾ ಪೂರ್ವದತ್ತ ತಿರುಗಿದ. "ರೋಲಾನನ್ನು ಭೂಮಿಗೆಳೆದು ತರಲು ಶ್ರೀರಾಮಕೃಷ್ಣ–ವಿವೇಕಾನಂದರು ಬೇಕಾಯಿತು" ಎಂದು ಅವನ ಜೀವನಚರಿತ್ರಕಾರ ಹೇಳಿದ್ದಾನೆ.

ರೋಲಾನ ಸೂಕ್ಷ್ಮವೇದಿ ಹೃದಯ ಮತ್ತು ಮನಸ್ಸಿನ ಮೇಲೆ ಶ್ರೀರಾಮಕೃಷ್ಣ–ವಿವೇಕಾನಂದರು ಪ್ರತಿನಿಧಿಸಿದ ವೇದಾಂತ ಪ್ರಭಾವ ಬೀರಿತು. ಆದರೆ ಯೂರೋಪಿನಲ್ಲಿ ಅವರ ಬಗ್ಗೆ ದೊರಕುತ್ತಿದ್ದ ಸಾಹಿತ್ಯ ಅತಿ ಕಡಮೆ. ' ಇಂಪೀರಿಯಲ್ ಅಂಡ್ ಏಷ್ಯಾಟಿಕ್ ಕ್ವಾರ್ಟರ್ಲಿ ರಿವ್ಯೂ'ನಲ್ಲಿ ಶ್ರೀರಾಮಕೃಷ್ಣರ ಬಗ್ಗೆ ಮೊತ್ತಮೊದಲು ಕೇಂಬ್ರಿಜ್‌ನ ಸದಸ್ಯ ಮತ್ತು ಸಂಸ್ಕೃತ ವಿದ್ವಾಂಸ ಸಿ.ಹೆಚ್.ಟಾವ್ನೆ ಬರೆದಿದ್ದ. ನರೇಂದ್ರನನ್ನು ಶ್ರೀರಾಮಕೃಷ್ಣರ ಬಳಿ ಕಳಿಸಿದ ಸ್ಕಾಟಿಷ್ ಪಾದ್ರಿ ಪ್ರಿನ್ಸಿಪಲ್ ವಿಲಿಯಂ ಹೇಸ್ಟಿ ಯುರೋಪಿಗೆ ಹಿಂದಿರುಗಿ ಅಲ್ಲಿನ ಚಿಂತಕ ರಲ್ಲಿ ಶ್ರೀರಾಮಕೃಷ್ಣರ ಬಗೆಗೆ ಅರಿವು ಮೂಡಿಸಿದ್ದರು. ಮ್ಯಾಕ್ಸ್ ಮುಲ್ಲರ್ ಶ್ರೀರಾಮಕೃಷ್ಣ-ವಿವೇಕಾನಂದರ ಜೀವನ ಚರಿತ್ರೆ, ಬೋಧನೆಗಳನ್ನು ಪ್ರಕಟಿಸಿದ್ದೇ ಅಲ್ಲದೆ, ಶ್ರೀರಾಮಕೃಷ್ಣರು ವೇದಾಂತ ಮಾರ್ಗದಲ್ಲೇ ಬಾಳಿದರೆಂದೂ, ಅವರ ಉಪ ದೇಶದ ತಿರುಳೇ ವೇದಾಂತವೆಂದೂ ಜಗತ್ತಿಗೆ ತಿಳಿಸಿದ್ದರು. ಇದಲ್ಲದೆ ಸ್ವಾಮಿ ಅಭೇದಾನಂದರ 'ಶ್ರೀರಾಮಕೃಷ್ಣರ ಬಗೆಗಿನ ನೆನಪುಗಳು', 'ಮ' (ವಚನವೇದದ ಲೇಖಕ ಮಾಸ್ಟರ್ ಮಹಾಶಯ) ಸಂಕ್ಷೇಪಿಸಿದ್ದ ಶ್ರೀರಾಮಕೃಷ್ಣ ವಚನವೇದ— ಇವು ಮಾತ್ರ ಆ ಕಾಲದಲ್ಲಿ ಇಂಗ್ಲಿಷಿನಲ್ಲಿ ಲಭ್ಯವಿದ್ದುವು.

ಧನಗೋಪಾಲ ಮುಖರ್ಜಿಯ 'ದಿ ಫೇಸ್ ಆಫ್ ಸೈಲೆನ್ಸ್' (ಮೌನದ ಮುಖ) ಎಂಬ ಪುಸ್ತಕದಿಂದ ಶ್ರೀರಾಮ ಕೃಷ್ಣರ ಹೆಸರನ್ನು ಮೊದಲು ಅರಿತುದಾಗಿ ರೋಲಾ ಹೇಳಿದ್ದಾನೆ. ಕ್ಯಾಲಿಫೋರ್ನಿಯದ ಸ್ಟಾನ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರದ ಉಪಪ್ರಾಧ್ಯಾಪಕರಾಗಿದ್ದ ಧನಗೋಪಾಲ್ ಮುಖರ್ಜಿ ೨೨ರ ತರುಣ. ಸ್ವಾಮಿ ವಿವೇಕಾನಂದರ ಶಿಷ್ಯೆ, 'ಟ್ಯಾಂಟೈನ್' 'ಜೋ' ಎಂದೆಲ್ಲ ಆಪ್ತವಾಗಿ ಕರೆಯಲ್ಪಡುತ್ತಿದ್ದ ಮಿಸ್ ಜೋಸೆಫಿನ್ ಮೆಕ್ಲಿಯಾಡ್ ಈತನನ್ನು ಭೇಟಿಯಾಗಿ ದ್ದಳು. ಸ್ವಾತಂತ್ರ್ಯ ಸಮರದಲ್ಲಿ ಕ್ರಾಂತಿಕಾರಿಯಾಗಿದ್ದು, ತನ್ನ ಸಹೋದರನನ್ನು ಬ್ರಿಟಿಷರು ಹಿಂಸಿಸಿ ಜೈಲಿಗೆ ಹಾಕಿದಾಗ, ಜೀವನ್ಮರಣದ ಪ್ರಶ್ನೆಯಾಗಿ ಅಮೆರಿಕಕ್ಕೆ ಬಂದ ಈತ ವಿದ್ಯಾಭ್ಯಾಸಕ್ಕಾಗಿ ತುಂಬ ಕಷ್ಟಪಟ್ಟಿದ್ದನು. ಕ್ರಮೇಣ ಮಕ್ಕಳ ಕತೆಗಾರನಾಗಿ ಪ್ರಸಿದ್ಧಿ, ಹಣ ಗಳಿಸಿ, ತನ್ನ ಪ್ರತಿಭೆಯಿಂದಾಗಿ ವಿಶ್ವವಿದ್ಯಾನಿಲಯದಲ್ಲಿ ಕೆಲಸಕ್ಕೆ ಸೇರಿದ್ದ. ಈತನ ಆಧ್ಯಾತ್ಮಿಕ ಒಲವು ಶಂಕರಾಚಾರ್ಯರತ್ತ ಇದ್ದುದನ್ನು ಕಂಡ ಮಿಸ್ ಮೆಕ್ಲಿಯಾಡ್ 'ನಾನೇ ಶಂಕರ' ಎಂಬ ಸ್ವಾಮಿ ವಿವೇಕಾ ನಂದರ ಹೇಳಿಕೆಯತ್ತ ಅವನ ಗಮನ ಸೆಳೆದು, ಸ್ವಾಮಿಜಿಯ ಉಪದೇಶಗಳು, ಪ್ರಪಂಚಕ್ಕೆ ಅವರು ನೀಡಿದ ಧ್ಯೇಯವನ್ನು ಮನದಟ್ಟು ಮಾಡಿಸಿದಳು. ತಾನು ನೋಡಿರದ ವಿವೇಕಾ ನಂದರ ಭಾವನೆಗಳನ್ನು ಮುಖರ್ಜಿ ಹೇಗೆ ಮೂರ್ತಗೊಳಿಸಿ ಕೊಂಡನೆಂದರೆ ಮಿಸ್ ಮೆಕ್ಲಿಯಾಡ್, "ವಿವೇಕಾನಂದರ ನಂತರ ಧನ್ ಭಾರತವನ್ನು ಅಮೆರಿಕಾಕ್ಕೆ ಸಮರ್ಥವಾಗಿ ಅರ್ಥಮಾಡಿಸುತ್ತಿದ್ದಾನೆ", ಎಂದು ಹೇಳುವಷ್ಟು. ಅಲ್ಲದೆ, ವಿವೇಕಾನಂದರು ತನಗಿತ್ತ ಹೃದಯಸಂಪತ್ತನ್ನು ತಾನು ಮುಖರ್ಜಿಯ ಮೇಲೆ ಧಾರೆಯೆರೆದು ಹಗುರಾಗಿರು ವುದಾಗಿಯೂ, ಭಾರತದ ಬಗೆಗಿನ ತನ್ನ ಜವಾಬ್ದಾರಿ ಅವನ ಹೆಗಲಿಗೇರಿದೆ ಎಂದೂ ಆಕೆ ತನ್ನ ಸಹೋದರರಿಗೆ ಬರೆದಿದ್ದರು.

ಮಿಸ್ ಮೆಕ್ಲಿಯಾಡ್‌ಳನ್ನು ಭೇಟಿಯಾದ ೧೨ ವರ್ಷದ ನಂತರ ಮುಖರ್ಜಿಯು ಲೀಗ್ ಆಫ್ ನೇಷನ್ಸ್‌ನಿಂದ ಪ್ರಶಂಸಿತವಾದ ತನ್ನ 'ಮೌನದ ಮುಖ'ವನ್ನು ಪ್ರಕಟಿಸಿದನು (೧೯೨೬). ಈ ಕೃತಿಯು ವಿಶ್ವದ ಚಿಂತಕರ, ಮುಖ್ಯವಾಗಿ ರೋಮೇ ರೋಲಾನ ಗಮನ ಸೆಳೆದು, ಅವನ ಮೇಲೆ ಆಳ ವಾದ ಪ್ರಭಾವ ಬೀರಿತು. ಆ ವೇಳೆಗಾಗಲೇ ಶ್ರೀರಾಮಕೃಷ್ಣ, ಮತ್ತು ರಾಮಕೃಷ್ಣ ಮಿಷನ್ ಬಗೆಗೆ ತನ್ನ ಅತಿಥಿಗಳಿಂದ ತಿಳಿದುಕೊಂಡಿದ್ದ ರೋಲಾ, ಮುಖರ್ಜಿಯನ್ನು ಫ್ರಾನ್ಸಿಗೆ

ಬರುವಂತೆ ಆಹ್ವಾನಿಸಿದ. ೧೯೨೮ರ ಅಕ್ಟೋಬರ್‌ನಲ್ಲಿ ಅಮೆರಿಕದಿಂದ ಬಂದು ತನ್ನನ್ನು ಭೇಟಿಯಾದ ಮುಖರ್ಜಿಯ ಬಗ್ಗೆ ರೋಲಾ ತನ್ನ ದಿನಚರಿಯಲ್ಲಿ ಬರೆದಿದ್ದಾನೆ. ಶ್ರೀರಾಮಕೃಷ್ಣರ ಬಗೆಗಿನ ರೋಲಾನ ಆಸಕ್ತಿ ಇದರಿಂದ ಮತ್ತೂ ಹೆಚ್ಚಿತು. ಇದಾದ ಒಂದು ವರ್ಷದ ಬಳಿಕ ರೋಲಾನನ್ನು ಮಿಸ್ ಮೆಕ್ಲಿಯಾಡ್ ಭೇಟಿ ಮಾಡಿ ಅವರಿಗೆ ಅನೇಕ ಪುಸ್ತಕಗಳನ್ನು ಕೊಟ್ಟರು. ಅವರ ತಂಗಿ ಅವುಗಳನ್ನು ಓದಿ, ಫ್ರೆಂಚಿನಲ್ಲಿ ವಿವರಿಸುತ್ತಿದ್ದಳು. ಭಾರತ ದೇಶದ ಭಾಷೆ ಮತ್ತು ಇತಿಹಾಸ ಅಥವಾ ಇಂಗ್ಲಿಷ್ ಭಾಷೆ ಕೂಡ ಗೊತ್ತಿಲ್ಲದ ರೋಲಾ ಈ ಎಲ್ಲ ಕೊರತೆಗಳನ್ನೂ ಮೀರಿ, ಗಾಂಧಿ ಹಾಗೂ ಶ್ರೀರಾಮಕೃಷ್ಣ–ವಿವೇಕಾನಂದರ ಕುರಿತಂತೆ ಪುಸ್ತಕಗಳನ್ನು ಬರೆದದ್ದು ಆಧುನಿಕ ಸಂಸ್ಕೃತಿಯ ಇತಿಹಾಸದಲ್ಲೆ ಒಂದು ಅಪೂರ್ವ ಘಟನೆ.

ರೋಲಾಗೆ ಪುಸ್ತಕಗಳನ್ನು ನೀಡಿದುದರ ಜೊತೆಗೆ ಮಿಸ್ ಮೆಕ್ಲಿಯಾಡ್ ತನ್ನ ಅನುಭವ, ಚಿಂತನೆಗಳನ್ನು ಪತ್ರಮುಖೇನ ತಿಳಿಸಿ ಅವನನ್ನು ಉತ್ತೇಜಿಸುತ್ತಿದ್ದಳು. ಶ್ರೀರಾಮಕೃಷ್ಣ ವಚನ ವೇದದ ಕರ್ತೃ 'ಮ' ನನ್ನು ನೋಡಿದ ತನ್ನ ವಿಶೇಷ ಅನುಭವವನ್ನು ಬರೆದಳು. ಶ್ರೀರಾಮಕೃಷ್ಣರ ನಿರ್ಯಾಣದ ದಶಕಗಳ ತರುವಾಯವೂ 'ಮ'ನ ವ್ಯಕ್ತಿತ್ವ ಶ್ರೀರಾಮಕೃಷ್ಣರ ಸ್ಪರ್ಶದಿಂದ ಉದ್ದೀಪ್ತವಾಗಿತ್ತು; ಶ್ರೀರಾಮಕೃಷ್ಣರ ವ್ಯಕ್ತಿತ್ವ ಸೂರ್ಯಸದೃಶವಾಗಿದ್ದು, ಹೆಚ್ಚಿನವರಿಗೆ ನೇರವಾಗಿ ತಿಳಿಯಲು ಅಸಾಧ್ಯ; ಅವರನ್ನು ಚಂದ್ರನಂತೆ ಪ್ರತಿಫಲಿಸುವ ವಿವೇಕಾನಂದರಿಂದ ಅರಿಯಬಹುದೆಂದು 'ಮ' ಹೇಳಿದ್ದನ್ನೂ ತಿಳಿಸಿದಳು. ಶ್ರೀರಾಮಕೃಷ್ಣರ ಬಗೆಗೆ ರೋಲಾ ಬರೆಯಲಿರುವುದನ್ನು ತಿಳಿದ ಭಾರತೀಯರಿಗಾದ ಸಂತೋಷ; ಹಿಂದಿನ ೩೦೦೦ ವರ್ಷಗಳ ಭಾರತವನ್ನು ಶ್ರೀರಾಮಕೃಷ್ಣರು ಪ್ರತಿನಿಧಿಸಿದರೆ, ಮುಂದಿನ ೩೦೦೦ ವರ್ಷಗಳನ್ನು ಸ್ವಾಮಿ ವಿವೇಕಾನಂದರು ಪ್ರತಿನಿಧಿಸುತ್ತಾರೆ; ಇಂತಹ ಅನುಭವವನ್ನು ಒಂದು ದೇಹ ಭರಿಸಲಾರದು ಎಂದು ಇಲ್ಲಿನವರು ಹೇಳುವುದನ್ನು ಪತ್ರದಲ್ಲಿ ಬರೆದಿದ್ದಳು.

ಮಿಸ್ ಮೆಕ್ಲಿಯಾಡ್ ರೋಲಾನನ್ನು ಇನ್ನೆರಡು ಬಾರಿ ಭೇಟಿಯಾದಳು. ಎಲ್ಲೆಡೆಯ ಹೂಗಳ ಮಕರಂದವನ್ನು ಸಂಗ್ರಹಿಸಿ ಅಲ್ಲೆಲ್ಲ ಪುನರುಜ್ಜೀವನದ ಪರಾಗವನ್ನೂ ಹರಡುವ ಸರಳ ಸಾತ್ವಿಕ ವ್ಯಕ್ತಿತ್ವದವಳೆಂದು ಮಿಸ್ ಮೆಕ್ಲಿಯಾಡ್‌ಳನ್ನು ರೋಲಾ ಬಣ್ಣಿಸಿದ್ದಾನೆ. ಅವನಿಗೆ ಗ್ರಂಥರಚನೆಯಲ್ಲಿ ತುಂಬ ಸಹಾಯ ಮಾಡಿದ ಇನ್ನೊಬ್ಬರು—ಸ್ವಾಮಿ ಅಶೋಕಾನಂದರಿಗೆ—ಮಿಸ್ ಮೆಕ್ಲಿಯಾಡ್‌ಳ ಜತೆಗಿನ ಸಂಭಾಷಣೆಗಳಿಂದ ಶ್ರೀರಾಮಕೃಷ್ಣರ ಅಂತರಂಗವನ್ನು ಅರಿತುದಾಗಿ ತಿಳಿಸುತ್ತಾನೆ. ಸ್ವಾಮಿ ವಿವೇಕಾನಂದರು ಅಧ್ಯಾತ್ಮಶಕ್ತಿಯ ಜ್ವಾಲೆಯಾದರೆ ಶ್ರೀರಾಮಕೃಷ್ಣರು ಪ್ರೀತಿಯ ಹೂ; ಇಬ್ಬರೂ ಅನಂತ ಜೀವನವನ್ನು, ದೈವಿಕತೆಯ ಕಿರಣಗಳನ್ನು ಹೊರಸೂಸುತ್ತಿರುವರೆಂದೂ, ಸ್ವಾಮಿಜಿ ಅತಿ ಅಸಾಧಾರಣ ಪ್ರತಿಭೆಯಾದರೆ ಶ್ರೀರಾಮಕೃಷ್ಣರು ಪ್ರತಿಭೆಗೆ ಅತೀತರೆಂದೂ ತನ್ನ ಅನಿಸಿಕೆಯನ್ನು ಬರೆದಿರುವನು. (ಮುಂದುವರೆಯುವುದು)


ಸ್ವಾಮಿ ಶಿವಾನಂದಜಿ

## ಅದ್ಭುತ ಕ್ಷಮೆ!

ಕ್ಷುದ್ರಬುದ್ಧಿಯ ಮಾನವ ತಪ್ಪು ಮಾಡುವುದು ಅಸಹಜವೇನಲ್ಲ; ಆದರೆ ಶ್ರೀಗುರು ಸರ್ವರಿಗೂ ಕೃಪೆ ಮಾಡಿಯೇ ಮಾಡುತ್ತಾನೆ. ಪಾಪಿಯೊ ತಾಪಿಯೊ ಯಾರೂ ಆತನ ಕೃಪೆಯಿಂದ ವಂಚಿತರಾಗುವುದಿಲ್ಲ....ಶ್ರೀರಾಮಕೃಷ್ಣರದು ಎಂತಹ ಅಸೀಮ ದಯೆ, ಎಂತಹ ಅದ್ಭುತ ಕ್ಷಮೆ! ಇನ್ನು ಶ್ರೀಮಾತೆಯೋ! ಅವರಿಗೆ ಎಣೆಯೇ ಇಲ್ಲ. ಸಾಕ್ಷಾತ್ ಜಗದಂಬೆ! ನಾನೆ ಕೇಳಿದ್ದೇನೆ, ಒಮ್ಮೆ ಒಬ್ಬರು ಮಹಾಮಾತೆಯ ಬಳಿಗೆ ಬಂದು ಯಾರೊ ಒಬ್ಬರ ಹೆಸರನ್ನು ಹೇಳಿ, ಕಿವಿಯಿಂದ ಕೇಳಬಾರದ ಅತ್ಯಂತ ಹೀನವಾದ ಅಸಹ್ಯ ಅಪರಾಧವನ್ನು ಆತ ಮಾಡಿದುದಾಗಿ ದೂರು ಹೇಳಿದರಂತೆ. ತಾಯಿ ತುಂಬ ಗಂಭೀರಭಾವದಿಂದ ಎಲ್ಲವನ್ನೂ ಆಲಿಸಿದ ಮೇಲೆ, ಆ ವ್ಯಕ್ತಿ ಮತ್ತೆ ಅತ್ಯಂತ ಕಳಕಳಿಯಿಂದ "ನೀವು ಆ ವ್ಯಕ್ತಿಯನ್ನು ಕರೆಯಿಸಿ ಸ್ವಲ್ಪ ಛೀಮಾರಿ ಮಾಡಿದರೆ ಒಳ್ಳೆಯದಾಗುತ್ತದೆ" ಎಂದು ಒತ್ತಾಯ ಮಾಡಿದರಂತೆ. ಅದಕ್ಕೆ ಶ್ರೀಮಾತೆ "ಏನಪ್ಪಾ ನೀನೇನೋ ಹಾಗೆ ಹೇಳುತ್ತಿ ಆದರೆ ನಾನು ಅವನ ತಾಯಿ. ನನ್ನ ಹತ್ತಿರ ಎಲ್ಲರೂ ಸಮಾನರೆ. ಅವನು ನಿನ್ನ ದೃಷ್ಟಿಯಿಂದೇನೊ ಮಹಾ ಅಪರಾಧಿ ಮತ್ತು ಕೆಟ್ಟವನು. ಆದರೆ ತಾಯಿಗೆ ಅವನು ಅಂಥವನೇನೂ ಆಗಿಲ್ಲ. ಅವನ ತಾಯಿಯಾಗಿ ಅವನನ್ನು ದ್ವೇಷಿಸಲು ನನಗೆ ಸಾಧ್ಯವಿಲ್ಲ." ಅಂಥ ಕ್ಷಮೆ ಶ್ರೀಮಾತೆಯದು! ಇದೆಲ್ಲ ಇನ್ನೂ ನಮ್ಮ ಕಣ್ಣಮುಂದೆಯೆ ಇದೆ. ನಾವೂ ಕೂಡ ಅದನ್ನೆ ಕಲಿತಿದ್ದೇವೆ.

**–ಸ್ವಾಮಿ ಶಿವಾನಂದಜಿ ಮಹಾರಾಜ್**